(b) if so, the action taken to control the spread of this dreadful disease ?

Sri H. SIDDAVEERAPPA (Minister for Health).—

(a) No.

(b) Does not arise in view of reply to clause (a) above.

LEAVE OF ABSENCE to Smt. Sheila Irani Grant of.

MADAM SPEAKER.— I have received a letter from Smt. Sheila Irani, Member, Legislative Assembly, requesting for leave of absence from attending the current sittings of the House as she will be going abroad.

It is the pleasure of the Assembly that permission be granted to Smt. Sheila Irani for remaining absent from the current sittings of the House ?

HON'BLE MEMBERS.— Yes.

MADAM SPEAKER.— Permission to remain absent is granted.

CALLING ATTENTION TO A MATTER OF URGENT PUBLIC IMPORTANCE

(i) Ref : the need to alleviate the hardship caused to the people due to long queues before the Janatha Bazaar and other Co-operative Societies for getting 5 Kgs. of rice.

Sri M. S. KRISHNAN (Malleswara).— Madam, I call the attention of the Hon. Minister of State for Food and Civil Supplies to the need to alleviate the hardship caused to the people due to long queues before the Janatha Bazaar and other Co-operative Societies for getting 5 Kgs. of rice.

Smt. E. E. VAZ (Minister of State for Food and Civil Supplies).–I beg to state as follows :

A stock of 2,400 quintals of rice collected by levy on permit, was required to be distributed to the general public. As there are nearly 800 Fair Price Shops in Bangalore, it was obviously not practicable to distribute the small quantity of 2,400 quintals of rice through so many Fair Price Shops. Therefore it was decided to distribute it

through some selected points in the City instead of all Fair Price Shops. To start with, six issue points, including Janatha Bazaars were fixed and later on another fourteen issues points were added in view of the long queues which were seen on the first few days.

This was good quality rice sold at comparativley cheaper rates, and so there was a feeling among some persons that they had been deprived of the opportunity of buying it and that they stood a better chance if the distribution had been done through fair price shops. In the above-said circumstances, however, this could not be helped.

It has now been decided to organise such sales through all Fair Price Shops in future, when such rice becomes available in sufficient quantity.

ಶ್ರೀ ಎ. ಎಸ್. ಕೃಷ್ಣನ್.— ಮಾನ್ಯ ಸಚಿವೆಯರು ಅವರಲ್ಲಿ ಕೇವಲ ೨೪೦೦ ಕ್ವಿಂಟಾಲ್ ಮಾತ್ರ ಅಕ್ಕಿ ಇದ್ದ ಕಾರಣ ಅದನ್ನು ಮೊದಲು ಒಂದು ಷಾಪಿನ ಮೂಲಕ ಹಂಚಲು ವ್ಯವಸ್ಥೆ ಮಾಡಿದ ನಂತರ ಅಲ್ಲಿ ಕ್ಯೂ ನಿಲ್ಲತಕ್ಕ ಜನರ ಸಂಖ್ಯೆ ದೊಡ್ಡದಾದ್ದರಿಂದ ಮತ್ತೆ ೧೪ ಷಾಪುಗಳಿಗೆ ಆ ಅಕ್ಕಿ ಹಂಚಿಕೆಯ ವಿತರಣೆ ಮಾಡಲಾಯಿತೆಂದು ಹೇಳಿದರು. ಇನ್ನು ಮುಂದೆ ಹೆಚ್ಚು ಅಕ್ಕಿ ಒದಗಿದ ಕಾಲಕ್ಕೆ ಈ ಹಂಚಿಕೆಯನ್ನು ಎಲ್ಲ ಷಾಪುಗಳ ಮೂಲಕವೂ ಮಾಡಲಾಗುತ್ತದೆ ಎಂದು ಅಪ್ಪಣೆ ಕೊಡಿಸಿದರು. ಅಂದರೆ ಮುಂದೆ ಯಾವಾಗ ಆ ಹೆಚ್ಚಿಗೆ ಅಕ್ಕಿ ಬರುವುದು? ಅದನ್ನು ಹಂಚಲು ಏನು ವ್ಯವಸ್ಥೆ ಮಾಡಿದ್ದಾರೆ?

ಶ್ರೀಮತಿ ಇ. ಇ. ವಾಜ್.— ನಾವೇನು ಈ ೨೪೦೦ ಕ್ವಿಂಟಾಲ್ ಅಕ್ಕಿಯನ್ನು ತಂದು ಹಂಚಿದೆವು. ರೆಗ್ಯುಲರಾಗಿ ಕಾರ್ಡ್‌ಹೋಲ್ಡರುಗಳಿಗೆ ಕೊಡಲು ನಿಗದಿಯಾಗಿದ್ದ ಅಕ್ಕಿಯಲ್ಲ. ರೆಗ್ಯುಲರಾಗಿ ಕೊಡುವುದನ್ನು ಎಲ್ಲ ಷಾಪುಗಳ ಮೂಲಕ ಹಂಚಿಕೆ ಮಾಡಲಾಗುತ್ತಿದೆ. ನಾವು ಹಬ್ಬಕ್ಕೆ ಸ್ಪೆಷಲ್ಲಾಗಿ ಹಂಚಿದ್ದು ಈ ೨೪೦೦ ಕ್ವಿಂಟಾಲ್ ಅಕ್ಕಿ. ಈ ಅಕ್ಕಿಯನ್ನು ನಾವು ಲೈಸೆನ್ಸ್ ಕೊಡತಕ್ಕ ಕಾಲದಲ್ಲಿ ಶೇ. ೫೦ ರಂತೆ ಮಿಲ್ಲಿನವರಿಂದ ವಸೂಲ್ಮಾಡಿದ ಅಕ್ಕಿ. ಇದು ಲೇವಿ ಅಕ್ಕಿಯಲ್ಲ. ಲೇವಿ ಅಕ್ಕಿಯನ್ನು ನಾವು ರೆಗ್ಯುಲರಾಗಿ ಜನವರಿಯಿಂದ ಜುಲೈವರೆಗೂ ಎಲ್ಲಾ ಫೇರ್‌ಪ್ರೈಜ್ ಷಾಪುಗಳ ಮೂಲಕ ಹಂಚಿಕೆ ಮಾಡುವಂತೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಂ. ಎನ್. ಕೃಷ್ಣನ್ — ಈ ಕ್ಯೂ ನಿಂತು ಅಕ್ಕಿಯನ್ನು ಕೊಳ್ಳುವುದರಲ್ಲಿ ಸರ್ಕಾರಿ ನೌಕರರಿಗೆ, ಕಾರ್ಮಿಕ ವರ್ಗದವರಿಗೆ ಮತ್ತು ಮಧ್ಯಮ ವರ್ಗದವರಿಗೆ

ಇರತಕ್ಕ ತೊಂದರೆ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ತಪ್ಪಿಸುವುದಕ್ಕೇನು ವ್ಯವಸ್ಥೆ ಮಾಡಿದ್ದಾರೆ?

ಶ್ರೀಮತಿ ಇ. ಇ. ವಾಜ್.— ನಾವು ಈಗಾಗಲೇ ಸರಿಯಾದ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದೇವೆ.

ಶ್ರೀ ಕೋಣಂದರೂ ಲಿಂಗಪ್ಪ.— ಮಾನ್ಯ ಕೃಷ್ಣನ್ ಅವರು ಮುಂದಿನ ವಿಚಾರವನ್ನು ಕಾದು ನರದಿಯ ಮೇಲೆ ನೋಡಬೇಕು ಅಷ್ಟೇ.

ಶ್ರೀಮತಿ ಇ. ಇ. ವಾಜ್.— ನಮಗೆ ಬರುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಹಂಚಲು ಎಲ್ಲ ಫೇರ್‌ಪ್ರೈಜ್ ಷಾಪುಗಳಿಗೂ ಹಂಚಲಾಗುತ್ತಿದೆ. ಆ ಸಾಮಾನುಗಳು ಜಾಸ್ತಿ ಬಂದರೆ ಜಾಸ್ತಿ ಕೊಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—

ಮಾನ್ಯ ಸದಸ್ಯರು ರೇಷನ್ ಪ್ರಮಾಣವನ್ನು ಜಾಸ್ತಿ ಮಾಡಿ ಅನ್ನುವದಾದರೆ ಅದು ಖಂಡಿತಾ ಸಾಧ್ಯವಾಗುವದಿಲ್ಲ. ಸರ್ಕಾರಕ್ಕೆ ಇತ್ತೀಚೆಗೆ ಹೈಬ್ರೀಡ್ ಜವಾರ್ ಬರುತ್ತಿದೆ. ಅದನ್ನು ಬೇಕಾದರೆ ಹಂಚುವುದಕ್ಕೆ ಏರ್ಪಾಡು ಮಾಡೋಣ. ಜನರು ಆಹಾರ ಪದ್ಧತಿನಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ತಯಾರಿರಬೇಕು? ಏನಾದರೂ ಇನ್ನು ಯಾವುದಾದರೂ ಬೇರೆ ಮಾರ್ಗದಲ್ಲಿ ಅಕ್ಕಿಯನ್ನು ಹೆಚ್ಚು ಪ್ರಮಾಣದಲ್ಲಿ ತರಿಸುವುದಕ್ಕೆ ಅನುಕೂಲವಿದೆಯೆಂದು ಹೇಳಿದರೆ ಅದಕ್ಕೆ ಸರ್ವಪ್ರಯತ್ನ ಮಾಡೋಣ ಕೇಂದ್ರ ಸರಕಾರದಿಂದ ಈಗ ಅಕ್ಕಿ ಸಿಗುವುದಿಲ್ಲ. ಗೋದಿಯನ್ನು ಕೇಳಿದ್ದೇವೆ. ಆದರೆ ಗೋದಿ ಸಿಗುವುದು ಇನ್ನೂ ಕಷ್ಟವಾಗಿದೆ. ಮಿಲೋ ೫ ಸಾವಿರ ಟನ್‌ಗಳಷ್ಟು ಈ ತಿಂಗಳು ಹೆಚ್ಚಿಗೆ ಕೊಡುತ್ತಾರೆ. ಮುಂದಿನ ತಿಂಗಳು ಇನ್ನೂ ಹೆಚ್ಚಿಗೆ ಅದನ್ನು ಕೊಡುತ್ತಾರೆ. ಆದ್ದರಿಂದ ಈಗ ನಾನು ಇದೇ ಆಗಬೇಕೆಂದೂ ಚಾಯ್ಸ್ ಮಾಡುವುದಕ್ಕಾಗುವುದಿಲ್ಲ. ನಾವು ಪ್ರತಿ ದಿನವೂ ಹಿಟ್ಟು ಊಟಮಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಸಹ ಅದನ್ನೇ ಊಟಮಾಡುತ್ತೇನೆ. ಆದರೆ ಎಲ್ಲರಿಗೂ ರಾಗಿ ಕೊಡಿಸುವುದಾದರೆ ಬಹಳ ಸಂತೋಷ. ಹೈಬ್ರಿಡ್ ಜೋಳ ಕೊಡುತ್ತೇವೆಂದರೆ ಹೇಗೆ ಈ ರಾಜ್ಯವಲ್ಲಿ ಅರ್ಧಭಾಗದಷ್ಟು ಜನ ರಾಗಿಯನ್ನು ಉಪಯೋಗಿಸುತ್ತಿದ್ದಾರೆ. ಆದ್ದರಿಂದ ರಾಗಿಯನ್ನಾದರೂ ಕೊಡಿಸಿ. ಇಲ್ಲದಿದ್ದರೆ ಈ ಜೋಳವನ್ನು ಜನ ತಿಂದರೆ ಕಾಯಿಲೆ ಕಸಾಲೆ ಉಂಟಾಗುವುದರಲ್ಲಿ ಏನೂ ಸಂದೇಹವಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದನ್ನೂ ಸಹ ಉಪಯೋಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಂ ಎಸ್. ಕೃಷ್ಣನ್.—ಹೈಬ್ರಿಡ್ ಜೋಳ ಕೊಡುತ್ತೇವೆಂದು ನೀವು ಹೇಳಿದರೆ ಅದನ್ನು ಜನ ಹೇಗೆ ಊಟಮಾಡುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಕೆಂಪು ಜೋಳದಲ್ಲಿ ರೊಟ್ಟಿ ಮಾಡಿಸಿ ತಿಂದರೆ ಅದು ಬಹಳ ಸಿಹಿಯಾಗಿರುತ್ತದೆ. ಆದರೆ ಅದು ಕೀಪಿಂಗ್ ಕ್ವಾಲಿಟಿಯಲ್ಲ. ಅದನ್ನು ಒಂದು ವರ್ಷ ಕಾಲ ಇಡುವುದು ಬಹಳ ಕಷ್ಟ ಹುಳ ಬಿದ್ದುಬಿಡುತ್ತದೆ. ಅದರಲ್ಲಿಯೂ ಇತ್ತೀಚೆಗೆ ನಮ್ಮ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರತಕ್ಕ ಒಂದೊಂದು ತಾಲ್ಲೂಕಿನಲ್ಲಿಯೂ ೫–೬ ಲಕ್ಷ ಕ್ವಿಂಟಾಲಿನಷ್ಟು ಕೆಂಪು ಜೋಳವನ್ನು ಬೆಳೆದಿದ್ದಾರೆ. ಅದರ ಬೆಲೆ ಬಹಳ ಕಡಿಮೆ ಇದೆ ಎಂಬುದಾಗಿ ಹೇಳಿದ್ದರಿಂದ, ಸರ್ಕಾರ ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದೆ. ಅದು ಈಗಾಗಲೇ ಪಬ್ಲಿಷ್ ಆಗಿದೆ. ಆದರ ಬೆಲೆ ಇನ್ನೂ ಕಡಿಮೆಯಾಗುತ್ತದೆಂದು ರೈತರ ಪ್ರತಿನಿಧಿಗಳು ಹೇಳಿದ್ದರೊಳಗೆ ೭೦ ರೂ. ಗಿಂತ ಅದರ ಬೆಲೆ ಕಡಿಮೆ ಆಗತಕ್ಕ ಸಂಭವ ಇದ್ದುದರಿಂದ ಅದನ್ನು ಸರ್ಕಾರವೇ ಕೊಂಡುಕೊಳ್ಳುತ್ತದೆ. ಅನೇಕರು ಇದರ ಬಗ್ಗೆ ಬೆಂಬಲವನ್ನು ಕೊಟ್ಟಿದ್ದಾರೆ. ಬೆಂಗಳೂರಿಗೆ ಇದರ ಸರಬರಾಜಿನ ಬಗ್ಗೆ ಅಂಕಿ ಅಂಶಗಳನ್ನು ಈಗಾಗಲೇ ತೆಖರಿಸಿ ಲೆಕ್ಕ ಹಾಕಿ ಕೆಲವು ಲಾರಿ ಲೋಡ್‌ನ ಕೆಂಪು ಜೋಳವನ್ನು ತರಿಸಿದ್ದೇವೆ. ಇನ್ನೂ ಯಥೇಚ್ಛವಾಗಿ ತರಿಸುವುದಕ್ಕೆ ಬೇಕಾದಷ್ಟು ಅನುಕೂಲಗಳಿವೆ.

ಶ್ರೀ ಎಂ ಎಸ್. ಕೃಷ್ಣನ್.—ಕೆಂಪು ಜೋಳವನ್ನೇ?

ಶ್ರೀ ಡಿ ದೇವರಾಜ್ ಅರಸ್.—ಹೌದು. ಬೆಂಗಳೂರಿನಲ್ಲಿ ನೂರಾರು ಸ್ಲಂ ಏರಿಯಾಗಳಿವೆ. ಅವರೆಲ್ಲರಿಗೂ ಇದನ್ನು ಕೊಟ್ಟರೆ ಸಂತೋಷವಾಗಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಹಿಂದೆ ಒಂದು ಸಾರಿ ಅವೇರಿಕಾದಿಂದ ಅಕ್ಕಿ ತರಿಸಿದ್ದರಿಂದ ಈ ರಾಜ್ಯದಲ್ಲಿ ಅದು ಚೆನ್ನಾಗಿಲ್ಲವೆಂದು ಬಹಳ ಗಲಾಟೆಯಾಗಿತ್ತು.

ಶ್ರೀ ಡಿ. ದೇವರಾಜ್ ಅರಸ್.—ಈ ದೇಶದಲ್ಲಿ ಸುಮಾರು ಒಂದು ಕೋಟಿ ಜನಗಳಿಗಿಂತ ಹೆಚ್ಚಿಗೆ ಇದನ್ನು ಊಟಮಾಡುತ್ತಾರೆ. ಅಂದಮೇಲೆ ಬೆಂಗಳೂರಿನಲ್ಲಿರುವ ೨–೩ ಲಕ್ಷ ಜನರು ಇದನ್ನು ಹಂಚಿದರೆ ಗಲಾಟೆಯಾಗುತ್ತದೆಂದು ಹೇಳಿದರೆ ಹೇಗೆ? ಮಾನ್ಯ ಸದಸ್ಯರು ಹಿಂದೆ ನಡೆದ ಯುದ್ಧದ ಕಾಲವನ್ನು ಸ್ವಲ್ಪ ಮಟ್ಟಿಗೆ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬೇಕಾಗಿದೆ. ಎರಡನೆಯ ಮಹಾಯುದ್ಧ ೧೯೪೨ನೇ ಇಸವಿಯಲ್ಲಿ ನಡೆದಾಗ, ಇದೇ ಪಟ್ಟಣದಲ್ಲಿ ಜನಗಳಿಗೆ ಗೋದಿ ಕೊಟ್ಟರೆ ಅದನ್ನು ಬಿಸಾಡುತ್ತಿದ್ದರು. ಅದರಲ್ಲಿಯೂ ನಮ್ಮ ಅಕ್ಕಪಕ್ಕದ ಪ್ರಾಂತವಾದ ಮದ್ರಾಸಿನಲ್ಲಿ ಗೋದಿಯನ್ನು ಆಗಿನ ಸರ್ಕಾರ ಕೊಡಲಿಲ್ಲ. ಈಗ ಏನಾಗಿದೆಯೆಂದರೆ, ಎಲ್ಲರೂ ಗೋದಿ ಕೊಡಿ ಎಂಬುದಾಗಿ ಕೇಳುತ್ತಾರೆ. ಇನ್ನು ಮುಂದೆ ಫುಡ್ ಹ್ಯಾಬಿಟ್ ಚೇಂಜ್ ಆಗುತ್ತವೆ. ಅಂದಮೇಲೆ ಜೋವರ್ ಜನ ತಿನ್ನುವುದಿಕ್ಕಾಗುವುದಿಲ್ಲವೆಂದು ಹೇಳಿದರೆ ಹೇಗೆ? ಅದನ್ನು ನಾವೇನೂ ವರ್ಷವೆಲ್ಲಾ ಕೊಡುವುದಿಲ್ಲ. ಇವತ್ತಿನ ದಿವಸ ಜನ ತಾತ್ಕಾಲಿಕವಾಗಿ ಅವನ್ನು ತಿನ್ನುವ ಅಭ್ಯಾಸವನ್ನು ಮಾಡುವುದಕ್ಕೆ ಏನು ತೊಂದರೆ?

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಯು. ಪಿ. ಮಂತ್ರಿ ಏನು ಹೇಳಿದರೆಂದರೆ, ಇಲಿಗಳನ್ನು ತಿಂದರೆ ಬಹಳ ಒಳ್ಳೆಯದೆಂದು. ಹೆಚ್ಚು ವಿಟಮಿನ್ನು ಅದರಲ್ಲಿರುತ್ತದೆಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಈ ಮಾನ್ಯ ಸದಸ್ಯರಿಗೆ ನಾನು ಖಂಡಿತವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಈ ರೀತಿಯಾಗಿ ಇಲ್ಲಿ ಪ್ರಚೋದನೆ ಮಾಡಿದರೆ ಅದಕ್ಕೆ ನಾನೇನೂ ಹೆದರತಕ್ಕವನಲ್ಲ. ಅವರು ಇದನ್ನು ಹೇಳಿಕೊಂಡು ಇಲ್ಲಿ ಪ್ರಚೋದನೆ ಮಾಡುತ್ತಿದ್ದಾರೆ. ದೇಶದಲ್ಲಿ ಕೋಟ್ಯಂತರ ಜನರು ಜೋಳವನ್ನು ತಿನ್ನುವಾಗ, ಅದನ್ನು ನಮ್ಮವರು ತಿನ್ನುವುದಕ್ಕಾಗುವುದಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿಯಾಗಿ ಸಿಕ್ಕಾಪಟ್ಟೆ ಕೋಪಮಾಡಿದರೇನೂ ಪ್ರಯೋಜನವಿಲ್ಲ. ನಾನು ಮೊದಲು ಹೇಳಿದಂತೆ ಒಬ್ಬ ಯು. ಪಿ. ಮಂತ್ರಿ ಹೇಳಿದ ಹಾಗೆ ಇಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿಲ್ಲ. ಬಹಳ ಸಂತೋಷ.

ಶ್ರೀ ಡಿ. ದೇವರಾಜ್ ಅರಸ್ —ಮಾನ್ಯ ಸದಸ್ಯರು ಹೇಳುವುದರಲ್ಲಿ ನನಗೂ ಅರ್ಥವಾಗುತ್ತದೆ. ಆ ರೀತಿಯಾಗಿ ಇಲ್ಲಿ ಪ್ರಚೋದನೆ ಮಾಡುವುದಕ್ಕೆ ಹೋಗಲು ಅವರಿಂದ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಚೋದನೆಯೆಂದು ಏಕೆ ಹೇಳುತ್ತೀರಿ ಜೋಳ ತಿನ್ನುವುದಕ್ಕೆ ಆಗುತ್ತದೆಯೇ ಎಂದು ಕೇಳಿದರೆ ಅದು ಪ್ರಚೋದನೆ ಆಗುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೆ ಅದನ್ನು ಮಾನ್ಯ ಸದಸ್ಯರು ಸುಮ್ಮನೆ ಹೇಳಿದರೆ? ಅದು ಪ್ರಚೋದನೆಯಲ್ಲವೇ?

ಅಧ್ಯಕ್ಷರು.— ಮಾನ್ಯ ಕೃಷ್ಣನ್‌ರವರ ಅನಾಲಜ್ ಸರಿಯಾಗಿಲ್ಲವೆಂದು ಮಾತ್ರ ನಾನು ಈಗ ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಇನ್ನು ಮೇಲೆ ಈ ನಗರದಲ್ಲಿರತಕ್ಕ ಹೋಟಲುಗಳನ್ನು ಮುಚ್ಚಬೇಕಾಗುತ್ತದೆ. ಹೊರಗಡೆಯಿಂದ ಪ್ರತಿದಿನವೂ ಲಕ್ಷಾಂತರ ಜನರು ಇಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಜೋಳದ ರೊಟ್ಟಿ ಕೊಟ್ಟರೆ ಸರಿಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಮುಂದೆ ಹೋಟಲುಗಳಲ್ಲಿಯೂ ಸಹ ಜೋಳದ ರೊಟ್ಟಿಗಳನ್ನು ಎಲ್ಲರಿಗೂ ಕೊಡಬೇಕಾಗುತ್ತದೆ. ಮಾಡಲಿ.

ಶ್ರೀ ಡಿ. ದೇವರಾಜ್ ಅರಸ್.—ಇದು ಹೊಸ ಸೂತ್ರ. ಇದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ತಿಳಿದುಕೊಳ್ಳುವ ವಿಷಯಗಳು ಇನ್ನು ಎಷ್ಟೋ ಇವೆ. ಕೆಂಪು ಜೋಳದಲ್ಲೆಯೂ ಬಹಳ ಚೆನ್ನಾಗಿ ರೊಟ್ಟಿ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಜೋಳದ ರೊಟ್ಟಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಂದಿದ್ದಾರೆಯೇ ಜೋಳದ ರೊಟ್ಟಿ ನನಗೆ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಮಾಡಿಸಿ ತೋರಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳ ಮನೆಯಲ್ಲಿ ಜೋಳದ ರೊಟ್ಟಿಯನ್ನು ಮಾಡಿಸಿ ಕೊಡಲಿ ನೋಡೋಣ.

ಶ್ರೀ ಡಿ. ದೇವರಾಜ್ ಅರಸ್.—ತಮ್ಮ ಅಪ್ಪಣೆ ಪಡೆದು ಖಂಡಿತವಾಗಿ ನನ್ನ ಮನೆಯಲ್ಲಿ ಅದನ್ನು ಮಾಡಿಸಿ ಅವರಿಗೆ ಕೊಡುತ್ತೇನೆ. ಅದನ್ನು ನನ್ನ ಮನೆಯಲ್ಲಿ ಮಾಡಿಸಿಯೇ ಊಟಕ್ಕೆ ಕರೆಯುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇದೆಲ್ಲಾ ಇವರ ತಪ್ಪುಗಳನ್ನು ಮುಚ್ಚಿಡುವುದಕ್ಕೋಸ್ಕರ ಮಾಡುತ್ತಿರುವ ಒಂದು ಉಪಾಯ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಜೋಳ, ರಾಗಿ ಕೊಟ್ಟರೂ ಅದನ್ನು ಊಟ ಮಾಡುವುದಕ್ಕೆ ಜನರು ಸಿದ್ಧರಾಗಿದ್ದಾರೆ. ಅಂದಮೇಲೆ ಇವರಿಗೇಕೆ ಇಷ್ಟು ತಾಪ.

ಶ್ರೀ ಎಂ. ಎಸ್. ಕೃಷ್ಣನ್.— ನಿಮ್ಮ ಮನೆಯಲ್ಲಿ ಸಣ್ಣಕ್ಕಿಯನ್ನು ತರಿಸುತ್ತಿದ್ದೀರಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ನಿಮಗೆ ಹೇಗೆ ಗೊತ್ತಾಯಿತು

ಶ್ರೀ ವಾಟಾಳ್ ನಾಗರಾಜ್.—ನಿಮ್ಮನ್ನು ನೋಡಿದರೇನೇ ಗೊತ್ತಾಗುತ್ತದೆ.

ಶ್ರೀ ಎಚ್. ಬಿ ಕೆ ಚೇಗೌಡ.—ಜೋಳ ರಾಗಿಯನ್ನು ಹಳ್ಳಿಯವರಿಗೆ ಕೊಡಿ. ಪಟ್ಟಣದವರಿಗೆ ಬರೀ ಅಕ್ಕಿಯನ್ನೇ ಕೊಡಿ

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ಎಷ್ಟು ಅಕ್ಕಿಯನ್ನು ಇಲ್ಲಿಗೆ ತಂದುಕೊಟ್ಟಿದ್ದಾರೆ?

ಶ್ರೀ ಕೆ. ಎನ್. ವೀರಪ್ಪಗೌಡ.—ಜೋಳದ ರೊಟ್ಟಿಯನ್ನು ಈಗಾಗಲೇ ನಮ್ಮ ಲೆಜಿಸ್ಲೇಟರ್ಸ್ ಹೋಂನಲ್ಲಿ ಎಲ್ಲರೂ ತಿನ್ನುತ್ತಿದ್ದಾರೆ.

Question of Privilege re : Remarks of the Secretary, Janasangh Party

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಅಧ್ಯಕ್ಷರೇ, ನಿನ್ನೆಯ ದಿವಸ "ಪ್ರಜಾವಾಣಿ" ಹಾಗೂ "ಕನ್ನಡ ಪ್ರಭಾ" ಪತ್ರಿಕೆಗಳಲ್ಲಿ ಬಂದಿರತಕ್ಕ ಸುದ್ದಿಯ ಬಗ್ಗೆ ನಾನು ತಮಗೆ ಒಂದು ಹಕ್ಕುಬಾಧ್ಯತೆಯ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದೇನೆ. ಜನಸಂಘದ ಕಾರ್ಯದರ್ಶಿಯವರಾದ ಶ್ರೀಮಾನ್ ದೇಶಪಾಂಡೆಯವರು ನನ್ನನ್ನು ಆಪಾದಿಸಿ ಬಹಳ ಕೀಳುಮಟ್ಟದ ಒಂದು ಭಾಷೆಯನ್ನು ಉಪಯೋಗಿಸಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನೂ ಸಹ ತಮಗೆ ಕಳುಹಿಸಿಕೊಟ್ಟಿದ್ದೀನಿ. ಮತ್ತು

ಮಾನ್ಯ ಮುಖ್ಯಮಂತ್ರಿಗಳೂ ಸಹ ಜನಸಂಘದವರ. ಒಂದು ಒತ್ತಾಯಕ್ಕೆ ಮಣಿದು ಹಾಸನದ ಒಂದು ಗಲಭೆ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆಗೆ ವ್ಯವಸ್ಥೆ ಮಾಡಿದ್ದರೂ, ನಾವು ಇಲ್ಲದಿದ್ದರೆ ಅದು ಆಗುತ್ತಿರಲಿಲ್ಲವೆಂಬ ಧಾಟಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಸ್ಪಷ್ಟೀಕರಣ ಕೊಡಬೇಕೆಂದು ಹೇಳ ಬಯಸುತ್ತೇನೆ. ಈ ಒಂದು ಪ್ರಕರಣದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಸದಸ್ಯರ ಕಳಕಳಿ ಮನವಿಯನ್ನು ಅಂಗೀಕರಿಸಿ ಅದರ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಅವಕಾಶ ಕೊಟ್ಟರೋ ಅಥವಾ ಜನಸಂಘದವರ ಒತ್ತಾಯಕ್ಕೆ ಮಣಿದು ನ್ಯಾಯಾಂಗ ವಿಚಾರಣೆಗೆ ಅವಕಾಶ ಕೊಟ್ಟರೋ ಎಂಬುದರ ಬಗ್ಗೆ ತಾವು ಅವರಿಗೆ ಸ್ಪಷ್ಟೀಕರಿಸಲು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

10-00 A. M.

ಶ್ರೀ ಎಚ್. ಎಸ್. ಸಿದ್ದಪ್ಪ. ಹಾಗೆಯೇ ನನ್ನ ಹಕ್ಕುಬಾದ್ಯತೆ ನಿರ್ಣಯದ ಬಗ್ಗೆ ಒಂದು ತೀರ್ಮಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ.—ಇಲ್ಲಿ ಜನಸಂಘದ ಸದಸ್ಯರು ಯಾರೂ ಇಲ್ಲ ವೆಂದು ಕಾಣುತ್ತದೆ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಆದರೆ ಒಂದು ವಿಚಾರ ನಿಜ. ನಾನು ಮೊನ್ನೆ ಭಾರತೀಯ ವಿದ್ಯಾರ್ಥಿ ಪರಿಷತ್ತಿನವರು ಜನಸಂಘಕ್ಕೆ ಸೇರಿದವರು ಎಂದು ಹೇಳಿದ್ದೇನೆ. ಅವರು ಈ ವಿಧ್ವಂಸಕ ಚಟುವಟಿಕೆಗಳಿಗೆ ಪ್ರಚೋದನೆ ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಬಹುಶಃ ತಾವೆಲ್ಲರೂ ಹಾಗೂ ಹಾಸನಕ್ಕೆ ಸಂಬಂಧಪಟ್ಟ ಸದಸ್ಯರು ಸಹ ಅದರ ಬಗ್ಗೆ ಒಂದು ವಿಚಾರಣೆ ಆಗ ಬೇಕೆಂದು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಎಲ್ಲಾ ವಿದ್ಯಾರ್ಥಿಗಳು ಜನಸಂಘಕ್ಕೆ ಸೇರಿದ ವರು ಎಂದು ಹೇಳುವುದು ಸರಿಯಲ್ಲ.

Sri D. DEVARAJ URS.—It does not require thousands of people to incite. Only a few people are enough. I know an incident created by an young man belonging to Jansangh and he has gone from place to plase with a view to excite others. He had created a lot of trouble and this is there.

ಇಲ್ಲ ತಾವೆಲ್ಲರೂ ತಮ್ಮ ಆತುರತೆಯನ್ನು ನೊಂದುಕೊಂಡು ಹೇಳಿದ್ದೀರಿ. ಅದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ನೀವೆಲ್ಲರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ಈ ಮಾನ್ಯ ಸಭೆಯ ಅಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕದ್ದು ನಮ್ಮ ಕರ್ತವ್ಯ. ನ್ಯಾಯ ಅನ್ಯಾಯವನ್ನು ತುಲನೆ ಮಾಡತಕ್ಕದ್ದು ಸರ್ಕಾರದ

ಕರ್ತವ್ಯ. ನಾನು ಹಿಂದಿನಿಂದಲೂ ಈ ಮಾತನ್ನು ಸತತವಾಗಿ ಹೇಳುತ್ತಾ ಬಂದಿದ್ದೇನೆ. ಬಹುಶ: ನಾನು ಹೇಳಿದಂತೆ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದ್ದೇನೆ ಎಂಬುದು ನಾವು ಮಾಡಿದ ನಾಲ್ಕಾರು ನಿದರ್ಶನಗಳಿಂದ ಈ ಸಭೆಗೆ ಗೊತ್ತಾಗುತ್ತದೆ. ಅದರಲ್ಲೂ ನಾನು ಜುಡಿಶಿಯಲ್ ಎನ್‌ಕ್ವಾರಿ ಮಾಡುತ್ತೇನೆಂದು ಹೇಳಿ ಕಮಿಟ್ ಮಾಡಿಕೊಂಡಿರಲಿಲ್ಲ. ನಾನು ಒಂದು ನಿಷ್ಪಕ್ಷಪಾತವಾದ ವಿಚಾರಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಹೇಳಿದ್ದೇನೆ. ಸರ್ಕಾರದ ಮೇಲೆ ಒಂದು ರೀತಿಯ ದೂರು ಇರತಕ್ಕದ್ದೇ ಸರಿಯಲ್ಲ ಮತ್ತು ಸಂಶಯ ನಿವಾರಣೆಯಾಗಲಿ ಎಂದು ಜುಡಿಶಿಯಲ್ ಎನ್‌ಕ್ವಾಯರಿಯಾಗಲಿ ಎಂದು ಮಾಡಿದ್ದೇವೆ. ಆದ್ದರಿಂದ ಅದನ್ನು ಯಾವುದೇ ಒಂದು ರಾಜಕೀಯ ಪಕ್ಷ, ಅದರಲ್ಲೂ ಜನಸಂಘದ ಒತ್ತಡಕ್ಕಂತೂ ಮಾಡಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ — ತಾವು ನ್ಯಾಯಾಂಗ ವಿಚಾರಣೆಗೆ ನ್ಯಾಯಾಧೀಶರನ್ನು ನೇಮಕ ಮಾಡಿದ್ದೀರಿ. ಅಲ್ಲಿ ಪ್ರಶ್ನೆ ಇರತಕ್ಕದ್ದು ಏನೆಂದರೆ, ವಿದ್ಯಾರ್ಥಿಗಳ ಮೇಲೆ ಪೋಲೀಸರು ದೌರ್ಜನ್ಯ ನಡೆಸಿದರು, ಆದ್ದರಿಂದ ನ್ಯಾಯಾಂಗ ವಿಚಾರಣೆಯ ಪರಿಮಿತಿಯೊಳಗೆ ಅದನ್ನು ಸಹ ಅಳವಡಿಸಿಕೊಳ್ಳಬೇಕೆಂಬುದು ನಮ್ಮ ಪ್ರಾರ್ಥನೆ. ಅಲ್ಲಿ ರಾಜು ಎಂಬವನ ಅನುಮಾನಾಸ್ಪದವಾದ ಸಾವು ಮತ್ತು ಅವನಿಗೆ ಸಂಬಂಧಪಟ್ಟವರ ವಿಚಾರದಲ್ಲಿ ತನಿಖೆ ಮಾಡಬೇಕೆಂಬುದರ ಬಗ್ಗೆ ಮಾತ್ರ ನ್ಯಾಯಾಂಗ ವಿಚಾರಣೆ ಸೀಮಿತವಾಗಿದೆ. ಆದ್ದರಿಂದ ವಿದ್ಯಾರ್ಥಿಗಳ ಮೇಲೆ ಪೋಲೀಸರು ದೌರ್ಜನ್ಯವನ್ನು ನಡೆಸಿದ ಬಗ್ಗೆಯೂ ಸೇರಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಇದರ ಬಗ್ಗೆ ಮುಖ್ಯಮಂತ್ರಿಯವರಿಂದ ಒಂದು ಸ್ಪಷ್ಟವಾದ ಉತ್ತರ ಬೇಕಾಗಿದೆ. ಏಕೆಂದರೆ ದೇಶ್ಯಾದ್ಯಂತ ವಿದ್ಯಾರ್ಥಿಗಳು ಏಕೆ ಚಳವಳಿ ಮಾಡುತ್ತಿದ್ದಾರೆಂದು ತಮಗೆ ಮನವರಿಕೆಯಾಗಿದೆ. ಅಲ್ಲಿ ಪೋಲೀಸರು ಬಹಳ ದೌರ್ಜನ್ಯವನ್ನು ವಿದ್ಯಾರ್ಥಿಗಳ ಮೇಲೆ ನಡೆಸಿದ್ದಾರೆ. ಆದ್ದರಿಂದ ಅದನ್ನು ಸಹ ನ್ಯಾಯಾಂಗ ವಿಚಾರಣೆಯ ಪರಿಮಿತಿಯೊಳಗೆ ಅಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಅವೆಲ್ಲವನ್ನು ಅವರು ಪರ್ಯಾಲೋಚನೆ ಮಾಡುತ್ತಾರೆ.

MADAM SPEAKER.—I have received a recommendation from the Governor that the Mysore Appropriation (No. 4) Bill, 1973 be introduced and considered by the Legislative Assembly.